ANNOUNCEMENT

Reg ; Visit of Mr. G. K. Ottenheimer, Minister of Justice and Attorney-General, Canada

MR. SPEAKER.—I am happy to inform this August House about the visit of Mr. G, R. Ottenheimer Minister of Justice and Attorney-General (New foundland) Canada,and his wife to our House to witness the proceedings. He is the Chairman of the Commonwealth Parliametary Association Executive Committee. Currently he is touring in India as the Guest of Lok Sabha. He is a well versed Parliamentarian

On my behalf and on behalf of the Members of this House, I extend a hearty welcome to Mr. Ottenheimer and his wife. I hope their visit to Karnataka was useful.

ಆಳಂದ ತಾಲ್ಲೂಕಿನಲ್ಲಿ ರಸ್ತೆ ಸಂಪರ್ಕವನ್ನು ಕಲ್ಪಿಸುವುದು

೧೭೨. ಶ್ರೀ ಬಿ.ಆರ್. ಪಾಟೀಲ್ (ಆಳಂದ).— ಮಾನ್ಯ ಲೋಕೋಪಯೋಗಿ ಹಾಗು ನೀರಾವರಿ ಮಂತ್ರಿಗಳು ದಯವಿಟ್ಟು ಈ ವಿಷಯವನ್ನು ತಿಳಿಸುವರೆ ?

ಅ) ಆಳಂದ ತಾಲ್ಲೂಕಿನಲ್ಲಿ ರಸ್ತೆ ಸೌಕರ್ಯ ಒದಗಿಸಲಾದ ಗ್ರಾಮಗಳ ಸಂಖ್ಯೆ ಎಷ್ಟು ?

ಆ) ರಸ್ತೆಗಳಿಲ್ಲದೆ ಗ್ರಾಮಗಳ ಸಂಖ್ಯೆ ಎಷ್ಟು ?

ಇ) ಉಳಿದ ಗ್ರಾಮಗಳಿಗೆ ರಸ್ತೆ ಸಂಪರ್ಕ ಒದಗಿಸುವ ಯೋಜನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೧೨೫

ಆ) ೩

ಇ) ಈ ಕಾರ್ಯವನ್ನು ಹಣಕಾಸು ಪರಿಸ್ಥಿತಿಯನ್ನವಲಂಬಿಸಿ ಹಂತ ಹಂತವಾಗಿ ತೆಗೆದುಕೊಳ್ಳುವುದನ್ನು ಪರಿಶೀಲಿಸಲಾಗುವುದು.

ಶ್ರೀ ಬಿ. ಆರ್. ಪಾಟೀಲ್ (ಆಳಂದ).—ಯಾವ ಯಾವ ತರಹದ ರಸ್ತೆಗಳಿಗೆ ಎಷ್ಟೆಷ್ಟು ಹಣ ಬೇಕಾಗುತ್ತದೆ ಎನ್ನುವಬಗ್ಗೆ ಮಾನ್ಯ ಮಂತ್ರಿಗಳವರು ಹೇಳಿದರೆ ನಾವು ಅಂದಾಜು ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ಕ್ಷೇತ್ರದಲ್ಲಿ ಆಲ್ ವೆದರ್ ರೋಡ್ಸ್ ೪೮ ಹಳ್ಳಿಗಳು ಇದೆ, ಫೇರ್ ವೆದರ್ ರೋಡ್ಸ್ ೧೧ ಹಳ್ಳಿಗಳು ಇವೆ, ಕಚ್ಚಾ ರಸ್ತೆಗಳು ೬೬ ಹಳ್ಳಿಗಳು ಇವೆ. ೩ ತಾಲ್ಲೂಕಿನಲ್ಲಿ ಮಾತ್ರ ರಸ್ತೆಗಳು ಯಾವುದೂ ಇಲ್ಲ ಅದರಲ್ಲಿ ನಂದಗೋಲು, ಸಿರೂರು ಮತ್ತು ಜೀವಗೋಲು, ಈ ಹಳ್ಳಿಗಳಲ್ಲಿ ಯಾವುದೇ ತರಹದ ರಸ್ತೆಗಳು ಇಲ್ಲ. ಇನ್ನು ಉಳಿದ ಎಲ್ಲಾ ಹಳ್ಳಿಗಳಲ್ಲಿ ಆಲ್ ವೆದರ್ ರೋಡ್‌ಗಳು ಮತ್ತು ಫೇರ್ ವೆದರ್ ರೋಡ್‌ಗಳು ಇವೆ. ಇನ್ನು ಈ ರಸ್ತೆಗಳನ್ನು ಇಂಪ್ರೂವ್ ಮಾಡುವುದಕ್ಕೆ ಹಣ ಎಷ್ಟು ಬೇಕಾಗುತ್ತದೆಂದು ಕೇಳಿದ್ದಾರೆ. ಆಲ್ ವೆದರ್ ರೋಡ್ ೩೪.೮ ಕಿಲೋ ಮೀಟರ್ ಇದೆ ಅದಕ್ಕೆ ೫೫ ಲಕ್ಷ ಬೇಕಾಗುತ್ತದೆ, ಕಚ್ಚಾ ರೋಡ್ ೧೯೬ ಕಿ. ಮೀ. ಇದೆ ಇದಕ್ಕೆ ೩೯೦ ಲಕ್ಷ ಬೇಕಾಗುತ್ತದೆ ಫೇರ್ ವೆದರ್ ರೋಡ್ ೯.೬ ಕಿ ಮೀ. ಇದೆ ಇದಕ್ಕೆ ೨೪ ಲಕ್ಷ ಬೇಕಾಗುತ್ತದೆ. ಒಟ್ಟು ೪೮೦ ಲಕ್ಷ ಹಣ ಬೇಕಾಗುತ್ತದೆ.ಈಗ ನಾವು ೧೩ಲಕ್ಷ ರೂಪಾಯಿಗಳನ್ನು ಒಂದುತಾಲ್ಲೂಕಿಗೆ ಖರ್ಚು ಮಾಡಬೇಕೆಂದು ಕೊಟ್ಟಿದ್ದೇವೆ. ಇಷ್ಟು ಕಾಣದಿಂದ ಅದನ್ನು ಇಂಪ್ರೂವ್ ಮಾಡಬೇಕಾಗುತ್ತದೆ. ಇನ್ನು ೩ ಹಳ್ಳಿಗಳಿಗೆ ಯಾವುದೇ ರಸ್ತೆಗಳು ಇಲ್ಲ ಅಲ್ಲಿಗೆ ರಸ್ತೆಯನ್ನು ಮಾಡಿಸುವುದಕ್ಕೆ ೧೯೮೪-೮೫ ರಲ್ಲಿ ಆದ್ಯತೆ ಕೊಟ್ಟು ಹಣವನ್ನು ಒದಗಿಸಿ ಕೊಡುತ್ತೇವೆ.

ಶ್ರೀ ಬಿ ಆರ್. ಪಾಟೀಲ್.—ನೀವು ೫–೧೦ ಲಕ್ಷ ರೂ.ಗಳನ್ನು ಒದಗಿಸುತ್ತಿದ್ದರೆ. ನಮ್ಮ ಜೀವಮಾನದಲ್ಲಿಯೇ ಆಗುವುದಿಲ್ಲ. ಆದುದರಿಂದ ತಾವು ಈ ಸಮಸ್ಯೆಯ ಗಂಭೀರತೆಯನ್ನು ಅರಿತು, ನಮ್ಮ ಹೈದರಾಬಾದ್ ಪ್ರದೇಶಕ್ಕೆ ಹೆಚ್ಚಿನ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹೈದರಾಬಾದ್ ಕರ್ನಾಟಕಕ್ಕೆ ತಾರತಮ್ಯವಾಗಿದೆ ಆದುದರಿಂದ ಅದನ್ನು ಸರಿಪಡಿಸಬೇಕಂ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಹೇಳತಕ್ಕಥಂದ್ದು ಸರ್ಕಾರದ ಗಮನದಲ್ಲಿದೆ. ಸ್ವಲ್ಪ ನಮ್ಮ ಸಂಪನ್ಮೂಲಗಳ ಕೊರತೆ ಇರುವುದು ನಿಮಗೂ ಗೊತ್ತಿದೆ. ಒಂದು ಕಡೆ ನೀರಾವರಿ ಕೆಲಸಗಳು, ಇನ್ನೊಂದು ಕಡೆ ರಸ್ತೆಗಳು–ಎರಡೂ ಏಕಕಾಲದಲ್ಲಿ ಆಗುವುದಿಲ್ಲ. ಮಾನ್ಯ ಸದಸ್ಯರು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸ್ವಲ್ಪ ವ್ಯತ್ಯಾಸವಿದೆ ಎಂದು ಹೇಳುತ್ತಾ ಇದ್ದಾರೆ ಅದನ್ನು ಸರಿದೂಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್‌ನ್ನು ಖಾಸಗಿಯವರಿಗೆ ಕೊಡುವ ಬಗ್ಗೆ

೨೭೫. ಶ್ರೀ ಎಂ ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನ ವೈಸ್‌ರಾಯ್ ವಿದ್ಯುತ್ ಕೈಗಾರಿಕೆಯನ್ನು ಖಾಸಗಿಯವರಿಗೆ ಮಾರಬೇಕೆಂದು ಸರ್ಕಾರವು ಯೋಚಿಸುತ್ತಿದೆ ಎಂಬುದು ನಿಜವೇ ?

ಆ) ಹಾಗಿದ್ದಲ್ಲಿ ಯಾರಿಗೆ ಮಾರಬೇಕೆಂದು ನಿರ್ಧರಿಸಲಾಗಿದೆ, ಅದರ ಷರತ್ತುಗಳೇನು ?

ಇ) ಈ ಕೈಗಾರಿಕೆಯನ್ನು ಸಾರ್ವಜನಿಕ ಕ್ಷೇತ್ರದಲ್ಲಿ ಉಳಿಸಬೇಕೆಂದು ಅಲ್ಲಿನ ಕಾರ್ಮಿಕರು ಮತ್ತಿತರರೂ ಒತ್ತಾಯಿಸಿದ್ದಾರೆಯೇ ?

ಈ) ಸರಕಾರಿ ವಲಯದ ಅಸ್ಪಷ್ಟ ಕೈಗಾರಿಕೆಗಳನ್ನು ಖಾಸಗಿ ಬಂಡವಾಳದಾರರಿಗೆ ಮಾರುವುದು ಸರಕಾರದವರ ಧೋರಣೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

ಅ) ಇಲ್ಲ.

ಆ) 'ಅ' ಗೆ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಇ) ಸಾರ್ವಜನಿಕ ಕ್ಷೇತ್ರದಲ್ಲಿ ಉಳಿಸಬೇಕೆಂದು ಕೇಳಿಲ್ಲ. ಆದರೆ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಕಾರ್ಮಿಕ ಸಂಘದವರು ಎನ್. ಜಿ. ಇ. ಎಫ್. ಅಥವಾ ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ ಜೊತೆಯಲ್ಲಿ ಮಾತ್ರ ವಿಲೀನಗೊಳಿಸಲು ಕೇಳಿದ್ದಾರೆ.

ಈ) ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಬೆಂಗಳೂರಿನ ಮೈಸೂರು ವಿದ್ಯುತ್ ಕೈಗಾರಿಕೆಯನ್ನು ಬೇರೆ ಖಾಸಗಿಯವರಿಗೆ ಕೊಡುತ್ತಾರೆ ಎನ್ನುವ ತಿಳುವಳಿಕೆ ಬಂದಿದೆ, ಪತ್ರಿಕೆಯಲ್ಲಿ ಹೇಳಿಕೆ ಬಂದಿದೆ. ಅದರಲ್ಲಿ ಮುಖ್ಯವಾಗಿ ಬಿ.ಹೆಚ್.ಇ.ಎಲ್.ನವರೇ ಹೇಳಿಕೆ ಕೊಟ್ಟಿರುವುದು ನಿಮ್ಮ ಗಮನಕ್ಕೆ ಬಂದಿದೆಯೆ ? ಬಂದಿದ್ದರೆ ಉತ್ತರವನ್ನು ಸೃಷ್ಟೀಕರಣವಾಡಿ ಕೊಟ್ಟಿದ್ದೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರ ನನ್ನ ಕಡೆಗೂ ಬಂದಿಲ್ಲ, ಸರ್ಕಾರದ ಕಡೆಗೂ ಬಂದಿಲ್ಲ. ಯಾರಿಗೂ ಇದನ್ನು ಕೊಡುವುದಿಲ್ಲ. ಈ ವಿಚಾರ ಸರ್ಕಾರದ ಮುಂದೆ ಸಹ ಇಲ್ಲ. ಮತ್ತು ಕೊಡುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನೀವೇ ಹೇಳಿದ್ದೀರಿ. ಒಪ್ಪಿಕೊಂಡಿದ್ದೀರಿ. ನಮ್ಮ ಕಾರ್ಮಿಕ ಸಂಘಗಳು ಆದನ್ನು ಎನ್.ಜಿ.ಇ.ಎಫ್.ಗೆ ಅಥವಾ ಭಾರತ್ ಹೆವಿ ಎಲೆಕ್ಟ್ರಿಕಲ್ಸ್‌ಗೆ ವಹಿಸಿಕೊಡಿ ಎಂದು ಕೇಳಿದ್ದಾರೆ. ಎನ್.ಜಿ.ಇ.ಎಫ್.ಗೆ ಅಥವಾ ಬಿ.ಹೆಚ್.ಇ.ಎಲ್.ಗೆ ವಹಿಸಿಕೊಡುವ ತೀರ್ಮಾನ ಕೈಗೊಂಡಿದ್ದೀರಾ ? ಇದರ ಬಗ್ಗೆ ಏನು ಯೋಚನೆ ಮಾಡಿದ್ದೀರಿ.